

# ಡ್ರ್ಯಾಗನ್ ಬೈಕ್

ಸ್ಟೈಲಿಷ್ ಬೈಕ್ ಯುವಕರ ಮೆಚ್ಚು. ಹೊಸ ಹೊಸ ವಿನ್ಯಾಸಗಳ ಬೈಕ್ ಮಾರುಕಟ್ಟೆಗೆ ಬಂದ ಕೂಡಲೇ ಅದನ್ನು ಕೊಂಡು ಒಂದು 'ಲಾಂಗ್ ಜಾಲಿ ರೈಡ್' ಹೋಗಿ ಬರುವ ತವಕ ಚಿಗುರು ಮೀಸೆಯ ಹುಡುಗರದ್ದು.

ನೋಟ ಮತ್ತು ವಿನ್ಯಾಸದಲ್ಲಿ ಡ್ರ್ಯಾಗನ್ ಅನ್ನೇ ಹೋಲುವ ಈ ಬೈಕ್ ನೋಡಿ. ಹೊಳಪುಳ್ಳ ಗೋಲ್ಡನ್ ಕಲರ್‌ನಲ್ಲಿರುವ ಈ ಬೈಕ್ ನೋಡಿದ ಕೂಡಲೇ ಬೈಕ್‌ಪ್ರಿಯರ ಚಿತ್ತ ಇದರತ್ತ ಹರಿಯುವುದರಲ್ಲಿ ಸಂಶಯವೇ ಇಲ್ಲ. ಇಷ್ಟೊಂದು ಆಕರ್ಷಕವಾದ ಈ ಬೈಕ್ ಅನ್ನು ಚೀನಾದ ನಂಜಿಂಗ್‌ನಲ್ಲಿರುವ ಶಾಪಿಂಗ್ ಮಾಲ್ ಒಂದರಲ್ಲಿ ಈಚೆಗೆ ಪ್ರದರ್ಶನಕ್ಕೆ ಇಡಲಾಗಿತ್ತು. ಈ ಡ್ರ್ಯಾಗನ್ ಬೈಕ್ 10 ಅಡಿ ಉದ್ದವಿದ್ದು ಮೇಲ್ನೋಟಕ್ಕೆ ಡ್ರ್ಯಾಗನ್‌ದ್ದೇ ವಿನ್ಯಾಸದಲ್ಲಿದೆ. ಬೈಕ್‌ನ ಮುಂದಿನ ಗಾಲಿ ದೊಡ್ಡದಿದ್ದು ಹಿಂದಿನ ಗಾಲಿ ಚಿಕ್ಕದಿದೆ. ಚಕ್ರಗಳನ್ನು ಕವರ್ ಮಾಡಿದ ಕವಚ ಡ್ರ್ಯಾಗನ್‌ನ ಕಾಲುಗಳಂತೆ ಇದ್ದು ವಿನ್ಯಾಸ ಮನಸೆಳೆಯುವಂತಿದೆ. ಹೊಂದಾಣಿಕೆ ಮಾಡಬಹುದಾದ ಹ್ಯಾಂಡಲ್ ಬಾರ್ ಮತ್ತು ಅನುಕೂಲಕರವಾದ ಹಾಗೆ ಸೀಟ್‌ಅನ್ನು ಎತ್ತರಿಸಬಹುದಾದ ಸೌಲಭ್ಯ ಇರುವುದು ಈ ಬೈಕ್‌ನ ಪ್ಲಸ್ ಪಾಯಿಂಟ್. ಬೈಕ್‌ನ ಹೊರ ಕವಚಕ್ಕೆ ಸ್ಟೀಲ್ ಫ್ರೇಮ್ ಇದೆ. ಮಕ್ಕಳನ್ನು, ಯುವಕರನ್ನು ಬಹುಬೇಗನೆ ಸೆಳೆಯುವಂತಿದೆ ಇದರ ವಿನ್ಯಾಸ.

■ **ಅವನೀಶ್**



